# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 04–01–2025** **ಸಮಯ : 2½ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. ನಮ್ಮಲ್ಲಿ ಪ್ರತಿಯೊಬ್ಬರು __________ ಸಮಾಜದ ಒಂದು ಭಾಗವಾಗಿದ್ದೇವೆ.
   (ಪರಿಸರ, ಮಾನವ, ಆಧುನಿಕ)
2. ಓದಲು ಸಮಯವಿರಲಿ. ಅದು _______ ಬುಗ್ಗೆ.
   (ಗೌರವದ, ಅಜ್ಞಾನದ, ಸುಜ್ಞಾನದ)
3. ಕ್ಷಮಾದಾನ _____ದ ಇನ್ನೊಂದು ಗುಣ.
   (ಗೆಳೆತನ, ಕುಟುಂಬ, ಸಹಕಾರ)
4. ದೀನತೆಯು ಇಡೀ _________ ಜನಾಂಗವನ್ನು ಪ್ರೀತಿಸಲು ಅವಕಾಶ ಮಾಡಿ ಕೊಡುತ್ತದೆ.
   (ದುರ್ಬಲ, ಮಾನವ, ಪ್ರಬಲ)
5. ನಮ್ಮ ಪ್ರತಿಭೆಗಳು, ನಡವಳಿಕೆ, ಆದರ್ಶ ನಡತೆಯಿಂದ ನಾವು ಇನ್ನೊಂದು _____ ತಳೆಯುತ್ತೇವೆ.
   (ಆಧ್ಯಾತ್ಮ ಜನ್ಮ, ಪುನರ್‌ಜನ್ಮ, ಜನ್ಮ)
6. ಮುಖಂಡನು ______ ಮುಟ್ಟಲು ಅವಿರತ ಶ್ರಮಿಸಬೇಕು.
   (ನೆಲೆಯನ್ನು, ಗುರಿಯನ್ನು, ಯಶಸ್ಸನ್ನು)
7. ನಿಸರ್ಗ ನಮಗೆ ಅನೇಕ ______ ಯನ್ನು ಕೊಡುತ್ತದೆ.
   (ಉಡುಗೊರೆ, ವೈವಿಧ್ಯತೆ, ಸಮಾನತೆ)
8. ಪ್ರತೀ ಮಾನವ ಜೀವಿಗೆ ____ ಯಿಂದ ಜೀವಿಸಲು ಮಾನವ ಹಕ್ಕುಗಳು ಅಗತ್ಯ.
   (ಗೌರವ, ದೀನತೆ, ಘನತೆ)
9. ಒಬ್ಬ ವ್ಯಕ್ತಿಯ ಮೌಲ್ಯವನ್ನು ಅವರು ಸಮಾಜದಲ್ಲಿ ಅಲಂಕರಿಸಿರುವ _______ಗಳಿಂದ ಅಳೆಯಬಾರದು.
   (ಪ್ರಭಾವ, ಅಂತಸ್ತು, ಶ್ರೀಮಂತಿಕೆ)
10. ಒಂದು ವಾರಕ್ಕೆ ಬೆಲೆ ಕಟ್ಟಲು ________ ಪತ್ರಿಕೆಯ ಸಂಪಾದಕರನ್ನು ಕೇಳಿ.
    (ವಾರ, ಮಾಸಿಕ, ದಿನ)



**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ: 5x1=5**

1. ನಾವು ಇಂದು ______ ಸಮಾಜದಲ್ಲಿ ಜೀವಿಸುತ್ತಿದ್ದೇವೆ.
2. ನಾವು ಪ್ರಥಮತಃ ನಮ್ಮ ________ ರಿಂದ ಜನ್ಮವನ್ನು ಪಡೆಯುತ್ತೇವೆ.
3. ತಂಡವನ್ನು ಕಟ್ಟುವುದು _________ನ ಆದ್ಯ ಕರ್ತವ್ಯ.
4. ವಾಸ್ತವವಾಗಿ ಸಾರ್ವತ್ರಿಕತೆಯ ಸೂತ್ರ ಶಾಂತಿ, ಪ್ರಗತಿ, ಮತ್ತು ______ ಮಂತ್ರವಾಗಿದೆ.
5. ಮಾವನ ಹಕ್ಕುಗಳನ್ನು ________ ಮಾಡುವಂತಿಲ್ಲ.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ವರ್ಷದ ಬೆಲೆ : ವಿದ್ಯಾರ್ಥಿ :: ದಿನದ ಬೆಲೆ : ________
2. ಕೆಲಸಕ್ಕೆ ಸಮಯ : ಯಶಸ್ಸಿನ ಬೆಲೆ :: ಆಟಕ್ಕೆ ಸಮಯ : ________
3. ಪ್ರಾರ್ಥಿಸುವ ಮೊದಲು : ಕ್ಷಮಿಸು :: ಸಾಯುವ ಮೊದಲು : ______
4. ಆಧ್ಯಾತ್ಮಿಕತೆ : ಆಧ್ಯಾತ್ಮಿಕ ಜನನ :: ದೈಹಿಕ ರಚನೆ : ______
5. ಅತ್ಯುತ್ತಮ ಆಚರಣೆ : ದೀನತೆ :: ಅತ್ಯುತ್ತಮ ಭದ್ರತೆ : ______

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ಸಂವೇದನಾಶೀಲತೆ ಎಂದರೇನು?
3. ಗಳಿಕೆಯ ಜನನ ಎಂದರೇನು?
4. ಸಮಯ ಎಂದರೇನು?
5. ಯಾವ ದುರ್ಗುಣಗಳು ಗೆಳೆತನವನ್ನು ನಾಶಗೊಳಿಸುತ್ತದೆ.

**V. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡಬಹುದು?
2. ಪರ ಸಂವೇದನಾಶೀಲತೆ ಎಂದರೇನು? ಅದರ ಅವಶ್ಯಕತೆ ಏನು?
3. ನಮ್ಮ ಸಮಾಜ ವೈವಿಧ್ಯಕತೆಯ ಸಮಾಜ ಎಂಬುದನ್ನು ವಿವರಿಸಿ.
4. "ದೀನತೆ ಎಂಬುವುದು ಒಂದು ಒಳ್ಳೆಯ ಗುಣ" ನಾಲ್ಕು ಕಾರಣಗಳನ್ನು ಬರೆಯಿರಿ.
5. ವಿವಿಧ ಬಗೆಯ ಹಕ್ಕುಗಳನ್ನು ಕುರಿತು ಬರೆಯಿರಿ.
6. ಡಾ। ಅಂಬೇಡ್ಕರ್‌ರವರಿಗೆ ದಲಿತರ ವಿಮೋಚನೆಗಾಗಿ ಸಮರ್ಪಣಾ ಭಾವದಿಂದ ದುಡಿಯಲು ಪ್ರಚೋದಿಸಿದ ಘಟನೆ ಯಾವುದು?

**VI. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ಸಾಮಾಜಿಕ ಪರಿಜ್ಞಾನ ಒಳಗೊಂಡಿರುವ ಅಂಶಗಳು ಯಾವುವು?
2. ಗೆಳೆತನ ಉಳಿಸಿಕೊಳ್ಳಲು ಯಾವ ಅಂಶಗಳನ್ನು ಗಮನಿಸುವುದು ಅಗತ್ಯ.
3. ಮುಖಂಡನಲ್ಲಿ ಇರಬೇಕಾದ ಮುಖ್ಯ ಗುಣಲಕ್ಷಣಗಳು ಯಾವುವು?

4. ಮಾನವ ಹಕ್ಕುಗಳು ಸಾರ್ವತ್ರಿಕವಾದುವುಗಳು ಏಕೆ?
5. ಪ್ರಜಾಪ್ರಭುತ್ವ ಸರಕಾರ ಕಾರ್ಯರೂಪಕ್ಕೆ ತರುವ ಆರು ಬಗೆಯ ಹಕ್ಕುಗಳು ಯಾವುವು?
6. ನಿನ್ನ ದೈನಂದಿನ ಜೀವನದಲ್ಲಿ ದೀನತೆಯನ್ನು ನೀನು ಹೇಗೆ ವ್ಯಕ್ತಪಡಿಸುವೆ?
7. ಸಂವೇದಿಸುತ್ತಿರುವಾಗ ನೀವೇನು ಮಾಡುತ್ತೀರಿ?

**VII. ಯಾವುದಾದರೂ ಒಂದು ವಿಷಯದ ಬಗ್ಗೆ ವಿವರಿಸಿ ಬರೆಯಿರಿ: 1x5=5**

1. ವೈವಿಧ್ಯಕತೆಯಲ್ಲಿ ಐಕ್ಯತೆ
2. ಸಂಪ್ರದಾಯ ಮತ್ತು ಮೂಢನಂಬಿಕೆಗಳು
3. ವಿದ್ಯೆಯ ಮಹತ್ವ

**VIII. ಯಾವುದಾದರೂ ಎರಡು ಪ್ರಶ್ನೆಗಳಿಗೆ ನಿಮ್ಮ ಸ್ವಂತ ವಾಕ್ಯಗಳಲ್ಲಿ ಉತ್ತರಿಸಿ: 2x5=10**

1. ಪ್ರಾರ್ಥನೆಯ ಮಹತ್ವ
2. ಸಮಯ ಒಂದು ಅಮೂಲ್ಯ ಸಂಪತ್ತು
3. ಗೆಳೆತನ

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಸವಿತ 10ನೇ ತರಗತಿ ವಿದ್ಯಾರ್ಥಿನಿ. ತುಂಬಾ ಪ್ರತಿಭಾವಂತೆ. ಮೃದು ಸ್ವಭಾವದವಳು. ಪ್ರತೀ ಪರೀಕ್ಷೆಗಳಲ್ಲಿ ತರಗತಿಯಲ್ಲಿ ತಾನೇ ಪ್ರಥಮ ಸ್ಥಾನ ಪಡೆಯುತ್ತಾಳೆ. ಅವಳು ತನ್ನ ಸಹಪಾಠಿಗಳಿಗೆ ಕಲಿಕೆಯಲ್ಲಿ ಸಹಾಯವನ್ನೂ ಮಾಡುತ್ತಾಳೆ. ಆದರೆ ಇತ್ತೀಚೆಗೆ ತನಗೆ ತರಗತಿಯಲ್ಲಿ 2ನೇ ಸ್ಥಾನ ಲಭಿಸಿದ್ದಕ್ಕೆ ತುಂಬಾ ದುಃಖಿತಳಾಗಿದ್ದಾಳೆ. ಇತರರಿಗೆ ಕಲಿಕೆಯಲ್ಲಿ ಸಹಾಯ ಮಾಡುವುದನ್ನು ನಿಲ್ಲಿಸಿದ್ದಾಳೆ. ಹಾಗೂ ಯಾವಾಗಲೂ ಸಿಟ್ಟಾಗಿರುತ್ತಾಳೆ.

   **a. i) ಸವಿತಾಳ ವರ್ತನೆ ಸರಿಯೇ?**
   **ii) ಏಕೆ?**
   **b. i) ಕಲಿಕೆಯಲ್ಲಿ ಇತರರಿಗೆ ನಾವು ಹೇಗೆ ಸಹಾಯ ಮಾಡಬಹುದು?**
   **ii) ಇದರಿಂದ ಏನು ಲಾಭವಿದೆ?**
   **c. i) ನೀನು ಸವಿತ ಆಗಿರುತ್ತಿದ್ದರೆ ಏನು ಮಾಡುತ್ತಿದ್ದೆ?**
   **ii) ಸವಿತಾಳಿಗೆ ನಿನ್ನ ಸಲಹೆ ಏನು?**

2. ಧನುಷ್ ಒಬ್ಬ ಬುದ್ಧಿವಂತ ವಿದ್ಯಾರ್ಥಿ. ಉತ್ತಮ ಗುಣ ನಡತೆ ಹೊಂದಿದ್ದಾನೆ. ಶ್ರದ್ಧೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಒಂದು ಬಾರಿ ಪ್ರಾಜೆಕ್ಟ್ ಮಾಡಲೆಂದು ಅಮ್ಮನ ಹತ್ತಿರ ಮೊಬೈಲ್ ಫೋನ್ ಕೇಳಿ ಪಡೆಯುತ್ತಾನೆ. ಸ್ನೇಹಿತರ ಒತ್ತಾಯದ ಮೇರೆಗೆ ಮೊಬೈಲ್‌ನಲ್ಲಿ ಆನ್‌ಲೈನ್ ಆಟಗಳನ್ನು ಆಡಲು ಪ್ರಾರಂಭಿಸುತ್ತಾನೆ. ನಂತರದ ದಿನಗಳಲ್ಲಿ ಪ್ರತಿನಿತ್ಯ ಅಮ್ಮನ ಮೊಬೈಲ್ ಪಡೆದು ಕದ್ದು ಮುಚ್ಚಿ ಆಟವಾಡುತ್ತಿರುತ್ತಾನೆ. ಪರಿಣಾಮವಾಗಿ ಪರೀಕ್ಷೆಯಲ್ಲಿ ಫೇಲ್ ಆಗುತ್ತಾನೆ.



   **a. i) ಧನುಷ್‌ನ ವರ್ತನೆ ಸರಿಯೆ?**
   **ii) ಏಕೆ?**
   **b. i) ಧನುಷ್‌ನ ಸ್ಥಾನದಲ್ಲಿ ನೀನಿರುತ್ತಿದ್ದರೆ ಏನು ಮಾಡುತ್ತಿದ್ದೆ?**
   **ii) ಏಕೆ?**
   **c. i) ಆಧುನಿಕ ಸಮಾಜಿಕ ಮಾದ್ಯಮಗಳಿಂದ ನಮಗೆ ಆಗುವ ಕೆಟ್ಟ ಪ್ರಭಾವಗಳು ಯಾವುವು?**
   **ii) ಈ ವಯಸ್ಸಿನಲ್ಲಿ ಮೊಬೈಲ್ ಬಳಕೆಯನ್ನು ನಾವು ಹೇಗೆ ನಿಯಂತ್ರಣದಲ್ಲಿಟ್ಟು ಬಳಸಬಹುದು?**

3. ರಮೇಶ ಹೆತ್ತವರಿಗೆ ಒಬ್ಬನೇ ಮಗ. ತಂದೆ–ತಾಯಿ ಅವನಿಗೆ ತಾನು ಕೇಳಿದ ಬಟ್ಟೆ–ಬರೆ, ತಿಂಡಿ–ತಿನಿಸು, ಆಟದ ವಸ್ತುಗಳು ಹೀಗೆ ಎಲ್ಲವನ್ನೂ ಕೊಡಿಸುತ್ತಿದ್ದರು. ಶಾಲೆಯಲ್ಲಿ ಶಿಕ್ಷಕರಿಗೂ ಈತನು ಅಚ್ಚು ಮೆಚ್ಚು. ಹಾಗಾಗಿ ಅವನನ್ನು ಶಾಲಾ ನಾಯಕನಾಗಿ ಆಯ್ಕೆ ಮಾಡುತ್ತಾರೆ. ಒಂದು ದಿನ ರಮೇಶನು ತಂದೆಯ ಪರ್ಸ್‌ನಿಂದ 500 ರೂಪಾಯಿಗಳನ್ನು ಕದಿಯುತ್ತಾನೆ. ಅಪ್ಪನಿಗೆ ಗೊತ್ತಾಗುವುದಿಲ್ಲ ಎಂದು ತಿಳಿದ ಮೇಲೆ ಪದೇ ಪದೇ ಈ ರೀತಿ ಮಾಡುತ್ತಾನೆ. ತನ್ನ ಸ್ನೇಹಿತರಿಗೆಲ್ಲಾ ತಿಂಡಿ ಕೊಡಿಸಿ, ತನ್ನೆಲ್ಲಾ ಕೆಲಸಗಳನ್ನು ಅವರಿಂದ ಮಾಡಿಸುತ್ತಾನೆ. ಸ್ನೇಹಿತರು ತಿಂಡಿಯ ಆಸೆಗೆ ಅವನು ಹೇಳಿದ ಹಾಗೆ ಮಾಡುತ್ತಿರುತ್ತಾರೆ.

   **a. i) ರಮೇಶ ಮಾಡಿದ್ದು ಸರಿಯೇ?**
   **ii) ಏಕೆ?**
   **b. i) ರಮೇಶನ ಸ್ಥಾನದಲ್ಲಿ ನೀನಿರುತ್ತಿದ್ದರೆ ಏನು ಮಾಡುತ್ತಿದ್ದೆ?**
   **ii) ಏಕೆ?**
   **c. i) ಒಬ್ಬ ಉತ್ತಮ ಸಹಪಾಠಿಯಾಗಿ ನೀನು ರಮೇಶನಿಗೆ ಏನು ಸಲಹೆ ನೀಡುವೆ?**
   **ii) ಉತ್ತಮ ಗೆಳೆತನದ ನಾಲ್ಕು ಲಕ್ಷಣಗಳನ್ನು ಬರೆ.**